**ಕರ್ನಾಟಕಸರ್ಕಾರ**

ಸಂಖ್ಯೆ:ಡಿಟಿಇ 20 ಇಎಸ್‌ಟಿ(7) 2020-21

ಆಯುಕ್ತರಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು - 560001,
ದಿನಾಂಕ:25-07-2020.

**ಕೋವಿಡ್-19**

## ಸುತ್ತೋಲೆ

**ವಿಷಯ:** ಕೋವಿಡ್-19 ಕಾರ್ಯ ನಿರ್ವಹಣೆಗೆ 55 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗ್ರೂಪ್ 'ಎ' 'ಬಿ' ಮತ್ತು 'ಸಿ' ವೃಂದದ ಅಧಿಕಾರಿಗಳ ಮತ್ತು ಸಿಬ್ಬಂದಿವರ್ಗದವರ ಮಾಹಿತಿ ಒದಗಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ:ಕಂಇ 158 ಟಿಎನ್‌ಆರ್2020ದಿ:24-07-2020.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶ ದಿನಾಂಕ:24-07-2020ರಲ್ಲಿ ಪ್ರಸ್ತುತ ಕೋವಿಡ್-19 ಬೆಂಗಳೂರು ಪ್ರದೇಶದಾದ್ಯಂತ ಪ್ರಕರಣಗಳು ಹೆಚ್ಚಾಗಿರುವುದರಿಂದ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಹಾಗೂ ಜಿಲ್ಲಾ ಮಟ್ಟದಲ್ಲಿ ಬೂತ್ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸಲು ಸಿಬ್ಬಂದಿಗಳ ಅವಶ್ಯಕತೆ ಇರುವುದರಿಂದ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಬೆಂಗಳೂರು ನಗರ, ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೇ ವಾಸವಾಗಿರುವ 55 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗ್ರೂಪ್ 'ಎ' 'ಬಿ' ಮತ್ತು ಸಿ' ವೃಂದದ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಮಾಹಿತಿಯನ್ನು**(ಗರ್ಭಿಣಿ, ಬಾಣಂತಿಯರು ಹಾಗೂ ವಿಕಲಚೇತನರನ್ನು ಹೊರತುಪಡಿಸಿ),** ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ **EXCEL FORMAT** ನಲ್ಲಿ ಭರ್ತಿ ಮಾಡಿ ತುರ್ತಾಗಿ **ದಿನಾಂಕ:27-07-2020ರ ಬೆಳಿಗ್ಗೆ 11.30 ಗಂಟೆಯೊಳಗೆ** ಈ ಇ-ಮೇಲ್ **dteest7@gmail.com** ಗೆ ಕಳುಹಿಸಲು ಈ ಮೂಲಕ ಸೂಚಿಸಲಾಗಿದೆ.

55 ವರ್ಷ ಮೇಲ್ಪಟ್ಟ ಅಧಿಕಾರಿ ಮತ್ತು ಸಿಬ್ಬಂದಿ, ಗರ್ಭಿಣಿ, ಬಾಣಂತಿಯರು ಹಾಗೂ ವಿಕಲಚೇತನರನ್ನು ಒಳಗೊಂಡಂತೆ ಪ್ರತಿ ಸಂಸ್ಥೆಯಲ್ಲಿನ ಶೇ.25ಕ್ಕಿಂತ ಹೆಚ್ಚದಂತೆ ಸಿಬ್ಬಂದಿ ಸಂಖ್ಯೆಯನ್ನು ಸಂಸ್ಥೆಯ ಅಗತ್ಯ ಕೆಲಸಗಳಿಗಾಗಿ ಉಳಿಸಿಕೊಂಡು, ಇತರ ಎಲ್ಲಾ ಅಧಿಕಾರಿಗಳ ಮತ್ತು ಸಿಬ್ಬಂದಿ ಪಟ್ಟಿಯನ್ನು (ಗ್ರೂಪ್ 'ಎ' 'ಬಿ' ಮತ್ತು 'ಸಿ' ಮಟ್ಟದ ಒಟ್ಟು ಸಿಬ್ಬಂದಿಗಳಲ್ಲಿ ಶೇ.75ರಷ್ಟು) ಸಲ್ಲಿಸಲು ತಿಳಿಸಲಾಗಿದೆ. ತಪ್ಪು ಅಥವಾ ತಡವಾಗಿ ಮಾಹಿತಿ ನೀಡಿದಲ್ಲಿ ಪ್ರಾಂಶುಪಾಲರೆ ಮುಂದಿನ ಆಗು ಹೋಗುಗಳಿಗೆ ನೇರ ಜವಾಬ್ದಾರರಾಗಿರುತ್ತಾರೆ ಹಾಗೂ ವಿಪತ್ತು ನಿರ್ವಹಣಾ ಕಾಯ್ದೆಯಡಿ ಶಿಸ್ತು ಕ್ರಮಕ್ಕೆ ಒಳಪಡಬೇಕಾಗುತ್ತದೆ.

-ಸಹಿ-

**ಜಂಟಿ ನಿರ್ದೇಶಕರು(ಆಡಳಿತ)**

**ಇವರಿಗೆ:**

ಬೆಂಗಳೂರಿನ ಎಲ್ಲಾ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್/ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರು- ಇವರ ಮುಂದಿನ ಸೂಕ್ತ ಕ್ರಮಕ್ಕೆ. **(ತುರ್ತಾಗಿ ಕಳುಹಿಸಿಕೊಡತಕ್ಕದ್ದು)**

**ಪ್ರತಿ ಮಾಹಿತಿಗಾಗಿ**

ಇ-ಆಡಳಿತ ಘಟಕ್ಕೆ - ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸುವುದು.

## ಅನುಬಂಧ

| ಕ್ರ.ಸಂ | ಹೆಸರು | ಲಿಂಗ | ವಯಸ್ಸು | ವೃಂದ | ಪದ ನಾಮ | ಮನೆ ವಿಳಾಸ | ವಾಸ ಸ್ಥಳದ ವಾರ್ಡ್ ಸಂಖ್ಯೆ | ಈಗಾಗಲೇ ಕೋವಿಡ್-19 ಕಾರ್ಯಕ್ಕೆ ವರದಿ ಮಾಡಿಕೊಂಡಿದ್ದಾರೆ (ಹೌದು/ಇಲ್ಲ) ಹೌದು ಎಂದಾದಲ್ಲಿ ವಾರ್ಡ್ ಸಂಖ್ಯೆ |
|---|---|---|---|---|---|---|---|---|